**<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಶ್ರೀ ಆರ್ ಯು ವಕೀಲರಿಂದಃ ಪ್ರತಿವಾದಿಯರ ಪರವಾಗಿಃ</u>**

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ ಕನ್ನಡ ಬರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಾವನ್ನು ಇಂಗ್ಲೀಷ್ ನಲ್ಲಿ ಬರೆಯಲಾಗಿದೆ ಎಂದರೆ ಸರಿ. ಇಂಗ್ಲೀಷ್ನಲ್ಲಿ ಬರೆದಿರುವುದರಿಂದ ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಈಗ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹಾಜರುಪಡಿಸಿರುವ ದಾಖಲಾತಿಗಳನ್ನು ಬಿಟ್ಟು ಬೇರೆ ಇನ್ಯಾವುದೇ ದಾಖಲಾತಿಗಳು ನನ್ನ ಬಳಿ ಇಲ್ಲ ಎಂದರೆ ಸರಿ.

ಪ್ರತಿವಾದಿ ತಿಪ್ಪೇಸ್ವಾಮಿಯ ಹೆಂಡತಿ ಶಾರದಮ್ಮ ಎಂದರೆ ಸರಿ. ಅವರಿಗೆ ರೂ. ನಾಗಲಕ್ಷ್ಮೀ, ಮೀನಾಕ್ಷಿ ಮತ್ತು ರಾಘವೇಂದ್ರ ಎಂದು 4 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ತಿಪ್ಪೇಸ್ವಾಮಿ ಕೂನಬೇವು ಗ್ರಾಮದಲ್ಲಿ ಶಾರದಮ್ಮನನ್ನು ಮದುವೆಯಾಗಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಕೂನಬೇವು ಗ್ರಾಮ ಚಿತ್ರದುರ್ಗ ತಾಲ್ಲೂಕು ತುರುವನೂರು ಹೋಬಳಿಗೆ ಸೇರಿದೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ ತಿಪ್ಪೇಸ್ವಾಮಿಯ ತಾಯಿ ಪಾಪಮ್ಮ ಗೌಡಗೆರೆ ಗ್ರಾಮದ ಏಕಾಂತಪ್ಪನಿಂದ ದಾವಾ ಸ್ವತ್ತನ್ನು ಖರೀದಿ ಮಾಡಿದ್ದಾಳೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಪಾಪಮ್ಮ ಅದನ್ನು ಖರೀದಿ ಮಾಡಿದ್ದಳು. ಪಾಪಮ್ಮ ನನ್ನ ತಾಯಿಯ ತಾಯಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಖರೀದಿ

ಮಾಡಿದಾಗಿನಿಂದಲೂ ಪ್ರತಿವಾದಿಯ ತಾಯಿ ಪಾಪಮ್ಮ ಮತ್ತು ಪ್ರತಿವಾದಿ ಇಂದಿನವರೆಗೂ ಸಾಗುವಳಿ ಮಾಡುತ್ತಾ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಪಾಪಮ್ಮ ತೀರಿಕೊಂಡ ಮೇಲೆ ಪ್ರತಿವಾದಿ ತನ್ನ ಹೆಸರಿಗೆ ಪೌತಿ ಖಾತೆ ಮಾಡಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ.

ಪ್ರತಿವಾದಿ ತನ್ನ ಹೆಸರಿಗೆ ಪೌತಿ ಖಾತೆ ಮಾಡಿಸಿಕೊಂಡ ಮೇಲೆ ನಾವು ಅದರ ವಿರುದ್ಧ ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯೊಂದಿಗೆ ನಾವು ಪಾಪಮ್ಮನ ವಂಶಸ್ಥರು ಎಂದು ತೋರಿಸಲು ನಾನು ಸಂಬಂಧಪಟ್ಟ ಇಲಾಖೆಯಿಂದ ಯಾವುದಾದರೂ ದಾಖಲೆ ಪಡೆದು ಹಾಜರುಪಡಿಸಿದ್ದಿನಾ ಎಂದರೆ ಡೆತ್ ಸರ್ಟಿಫೀಕೇಟ್ ಹಾಜರುಪಡಿಸಿದ್ದೇನೆ. ಗೌಡಗೆರೆ ಗ್ರಾಮದಲ್ಲಿ ಜಮೀನಿನ ಬೆಲೆ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ. ಗೌಡಗೆರೆ ಗ್ರಾಮದಲ್ಲಿ 1 ಎಕರೆ ಜಮೀನಿಗೆ 50 ಸಾವಿರ ರೂ. ಬೆಲೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬೆಲೆ ಕಡಿಮೆ ಇರುವುದರಿಂದ ಈ ನ್ಯಾಯಾಲಯದ ವ್ಯಾಪ್ತಿಗೆ ಈ ದಾವೆ ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ.

ವಾಲ್ಮೀಕಿ ನಾಯಂಗ ಜನಾಂಗದವರನ್ನು ಎಸ್ ಟಿ ಎಂದು ಗುರುತಿಸಲಾಗಿದೆ ಎಂದರೆ ಸರಿ, ನಾಯಕ ಸಂಪ್ರದಾಯವನ್ನೇ ನಾವು ಈಗಲೂ ಆಚರಿಸುತ್ತೇವೆ ಎಂರದೆ ಸರಿ. ನಾಯಕ ಜನಾಂಗದವರಾದ ನಾವು ಹಿಂದೂ ವಾರಸಕಾಯ್ದೆ ಅಡಿಯಲ್ಲಿ ಪಾಲು ವಿಭಾಗ ಕೇಳಲು ಅರ್ಹರಲ್ಲ ಎಂದರೆ ಸರಿಯಲ್ಲ. ಈ ಕೇಸನ್ನು ನಡೆಸಲು ಈ ನ್ಯಾಯಾಲಯಕ್ಕೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ತಿಪ್ಪೇಸ್ವಾಮಿ ಗೌಡಗೆರೆಯಲ್ಲಿ ವಾಸ ಮಾಡುತ್ತಿದ್ದರು ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನಾವು ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದೆವು ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಪಾಪಮ್ಮ ಬರೆದುಕೊಟ್ಟಿದ್ದರು ಎಂದು ಹೇಳಲಾದ ಮರಣ ಶಾಸನ ಯಾನೆ ವಿಲ್ ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಮಲ್ಲಿಕಾರ್ಜುನ ನಮ್ಮ ಅಣ್ಣ, ಅವನು ಈಗ ಇಲ್ಲ ತೀರಿಕೊಂಡಿದ್ದಾನೆ. ಅವನು ಮರಣಾ ಸಮರ್ಥನಾ ಪತ್ರವನ್ನು ಹಾಜರುಪಡಿಸಿದ್ದೇನೆ. ತಿಪ್ಪಮ್ಮನ ಮರಣಾ ಸಮರ್ಥನಾ ಪತ್ರವನ್ನು ಹಾಜರುಪಡಿಸಿದ್ದೇನೆ. ಕಂದಾಯ ದಾಖಲಾತಿಗಳಲ್ಲಿ ಹೆಸರು ಬಂದ ಮಾತ್ರಕ್ಕೆ ನಾವು ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಕಂದಾಯ ದಾಖಲಾತಿಗಳೆಲ್ಲಾ ಕಂದಾಯ ಅಧಿಕಾರಿಗಳೊಂದಿಗೆ ಷರೀಕಾಗಿ ಸುಳ್ಳು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಭಾಗ ಬೇಕು ಎಂದು ಕೇಳಿ ಪಂಚಾಯತಿ ಮಾಡಿದ್ದೆವು ಎಂದು ಹೇಳಿದ್ದು ಅದರ ದಿನಾಂಕ ನನಗೆ ಹೇಳಲಾಗುವುದಿಲ್ಲ. ನಮ್ಮ ಕುಟುಂಬಕ್ಕೆ ಪ್ರತಿವಾದಿ ತಿಪ್ಪೇಸ್ವಾಮಿಯ ಕುಟುಂಬಕ್ಕೂ ಯಾವುದೇ ಸಂಬಂಧವೇ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿ ತಿಪ್ಪೇಸ್ವಾಮಿ ತಾಯಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ನಿಪಿ-19 ರಿಂದ 34 ರವರೆಗಿನ ಸ್ವತ್ತನ್ನು ಖರೀದಿ ಮಾಡಿದ್ದರಿಂದ ಅದರಲ್ಲಿ ಎಂ ಆರ್ ನಂ.7/84-85 ಕೊಂಡಿದ್ದು ಎಂದು ನಮೂದು ಇದೆ ಎಂದರೆ ಸರಿ, ನಾನು ಸ್ವತಃ ಹೇಳುವುದೇನೆಂದರೆ ನಮ್ಮ ತಾಯಿಯ ತಾಯಿ ಅದನ್ನು ಖರೀದಿ ಮಾಡಿರುತ್ತಾರೆ. ನಿಪಿ-1 ರಿಂದ 34 ರವರೆಗಿನ ದಾಖಲಾತಿಗಳಲ್ಲಿ ಮಲ್ಲಿಕಾರ್ಜುನ ಮೈನರ್ ಗಾರ್ಡಿಯನ್ ತಾಯಿ ತಿಪ್ಪಮ್ಮ ಎಂದು ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಷರೀಕಾಗಿ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ತಾಯಿ ತಿಪ್ಪಮ್ಮ ತಿಪ್ಪೇಸ್ವಾಮಿಯನ್ನು ಮದುವೆಯಾಗಿದ್ದಳು ಎಂದು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-18 ರ ಪ್ರಕಾರ 2016-17 ನೇ ಸಾಲಿನಲ್ಲಿ ಎಂ ಆರ್ ನಂ.ಟಿ12/2016-17 ರಲ್ಲಿ ಸದರಿ ಸ್ವತ್ತನ್ನು ಒಟ್ಟುಗೂಡಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಗೆ ಅದು ಒಟ್ಟುಗೂಡಿಸಿರುವುದರಿಂದ ದಾವಾ ಸ್ವತ್ತಿನಲ್ಲಿ ಯಾವುದೇ ಭಾಗ ಕೇಳಲು ನಮಗೆ ಹಕ್ಕೇ ಇಲ್ಲ ಎಂದರೆ ಸರಿಯಲ್ಲ. ನಾನು ಆಸ್ತಿಗೋಸ್ಕರ ದಾಖಲಾತಿಗಳನ್ನು ಸುಳ್ಳು ಸೃಷ್ಠಿ ಮಾಡಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿಗೆ ಹೆದರಿಸಿ ಕಬಳಿಸುವ ಉದ್ದೇಶದಿಂದ ಈ ಸುಳ್ಳು ಕೇಸನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು

ಅಧಿಕಾರ ಇಲ್ಲದಿದ್ದರೂ ನಾನು ಸುಳ್ಳು ಕೇಸನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ ಚಳ್ಳಕೆರೆ.